# ಅಭಿವೃದ್ಧಿಯ ಮೂಲಕ ಶಿಕ್ಷಕರ ಸಬಲೀಕರಣ

**ಭವಾನಿ ರಘುನಂದನ್**

ನಾನು ಹೈದರಾಬಾದಿನಲ್ಲಿ ನನ್ನ ಮಗನನ್ನು ಶಾಲೆಗೆ ಸೇರಿಸಲು ಹೋದುದೇ ನಿಮಿತ್ತವಾಗಿ ಆಕಸ್ಮಿಕವಾಗಿ ಶಿಕ್ಷಕಿಯಾದೆ. ಶಾಲೆಗೆ ಸೇರಿಸಲು ಹೋದಾಗ ಅಲ್ಲಿ ಮಗನ ಕೆಲಸ ಮುಗಿಯುವ ವರೆಗೆ ಕಾಯಬೇಕಾಯಿತು. ನಾನೂ ಈ ಕ್ಷೇತ್ರಕ್ಕೆ ಕೊಡುಗೆ ನೀಡಬಹುದಲ್ಲ ಎಂದು ಅನಿಸಿದ್ದೇ ಆವಾಗ. ಹೀಗೆ ಶಿಕ್ಷಣದ ಜತೆಗಿನ ನನ್ನ 32 ವರ್ಷಗಳ ಸಂಬಂಧ ಪ್ರಾರಂಭವಾಯಿತು.

ನಾನು ಇಲ್ಲಿ ಶಾಲೆ (ಸ್ಕೂಲಿಂಗ್) ಎಂಬ ಪದ ಬಳಸಿಲ್ಲ; ಬದಲು 'ಕಲಿಕೆ' (ಎಜುಕೇಶನ್) ಎಂದು ಉದ್ದೇಶಪೂರ್ವಕವಾಗಿಯೇ ಬಳಸಿದ್ದೇನೆ. ಒಳಗೆ ಹೋದವಳನ್ನು ಮಕ್ಕಳಿಗೆ ಅರಿವನ್ನು ನೀಡುವ ಪ್ರಕ್ರಿಯೆಯು ಅದರ ಎಲ್ಲಾ ಸೂಕ್ಷ್ಮ ಮಗ್ಗುಲು ಹಾಗೂ ಆಯಾಮಗಳೊಂದಿಗೆ ತನ್ನೊಳಕ್ಕೆ ಸೆಳೆದುಕೊಂಡಿತು. ಈ ವೃತ್ತಿಯ ವ್ಯಾಪಕತೆ ಹಾಗೂ ಮಹತ್ವ ಎಂತಹದು ಎಂಬುದು ನನ್ನ ಮುಂದೆ ತೆರೆದುಕೊಂಡಿತು. ಅದೊಂದು ಕೇವಲ ವೃತ್ತಿಯೋ, ಸಂಪಾದನೆಯ ಮಾರ್ಗವೋ ಆಗಿರಲಿಲ್ಲ. ಬದಲಾಗಿ ಅದೊಂದು ಪ್ರವೃತ್ತಿಯೇ ಆಗಿತ್ತು.

ಅತ್ಯುತ್ತಮ ಸ್ನಾತಕೋತ್ತರ ಶಿಕ್ಷಣ ಹಾಗೂ ಜತೆಗೆ ಬಿ.ಎಡ್. ಪದವಿಯನ್ನು ಗಳಿಸಿದ್ದ ನಾನು ಮಕ್ಕಳಿಗೆ ಸರಾಗವಾಗಿ ಕಲಿಸಬಲ್ಲೆ ಎಂಬ ಆತ್ಮವಿಶ್ವಾಸದಲ್ಲಿದ್ದೆ; ಆದರೆ ಅಷ್ಟಿದ್ದೂ ನಿಜವಾಗಿಯೂ ಕಲಿಸುವ ಅರ್ಹತೆ ನನಗಿದೆಯೇ ಎಂಬ ಅನುಮಾನ ಕಾಡತೊಡಗಿತು. ಒಬ್ಬ ವೃತ್ತಿಪರ ಶಿಕ್ಷಕಿಯಾಗುವ ಮೂಲ ಅರ್ಹತೆಗಳು ನನಗಿರಲಿಲ್ಲ–ಉದಾಹರಣೆಗೆ ತಾಳ್ಮೆ–ಅದು ನನ್ನಲ್ಲಿ ಇರಲೇ ಇಲ್ಲ, ಸಹನೆ–ತುಂಬಾ ಕೆಳಮಟ್ಟದಲ್ಲಿತ್ತು. ಸಂವಹನ ಸಾಮರ್ಥ್ಯ–ನನ್ನ ಇಂಗ್ಲಿಷ್ ಜ್ಞಾನ ಪ್ರಾಥಮಿಕ ಸ್ವರೂಪದ್ದಾಗಿದ್ದು ಉತ್ತಮವಾಗಿದ್ದರೂ ಪಳಗಬೇಕಿತ್ತು. ಈ ಪಟ್ಟಿ ಉದ್ದವಿತ್ತು. ಮಕ್ಕಳಿಗೆ ಪಾಠ ಅರ್ಥವಾಗಬೇಕಿದ್ದರೆ ಬಹಳಷ್ಟು ಪರಿಶ್ರಮದ ಅಗತ್ಯವಿದೆಯೆಂದು ನನಗೆ ಮನವರಿಕೆಯಾಯಿತು. ಮಿತವಾದ ಆತ್ಮವಿಶ್ವಾಸದೊಂದಿಗೆ ಹೀಗೆ ಪ್ರಾರಂಭಗೊಂಡ ನನ್ನ ಅಧ್ಯಾಪನ ವೃತ್ತಿ ಕೆಲಕಾಲದಲ್ಲೇ ವಿದ್ಯಾರ್ಥಿಗಳನ್ನು ಎದುರಿಸುವುದಕ್ಕೆ ಭಯಪಡುವ ಸ್ಥಿತಿಗೆ ಬಂತು; ಒಂದು ಬಗೆಯ ಖಿನ್ನತೆ ಆವರಿಸಿತು.

ಜ್ಞಾನೋದಯ ; ನಾನು ನನ್ನ ಬೋಧನೆಯ ಪರಿಣತಿಯನ್ನು ಸುಧಾರಿಸಿಕೊಳ್ಳಬೇಕಿದೆ!

ಹಾಗಾಗಿ ನಾನು ಓದಲು ಆರಂಭಿಸಿದೆ. ಅದು ಅಂತರ್ಜಾಲಕ್ಕಿಂತ, ಗೂಗಲ್‌ಗಿಂತ ಹಾಗೂ ಶಿಕ್ಷಕ ತರಬೇತಿಗಿಂತ ಹಿಂದಿನ ಯುಗವಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಿ. ಶಿಕ್ಷಣದ ಬಗ್ಗೆ ಏನು ಲೇಖನ ಸಿಕ್ಕಿತೋ ಅದನ್ನು ಓದತೊಡಗಿದೆ; ಹಾಗೆ ಸಿಗುವುದೇ ಆಗೊಮ್ಮೆ ಈಗೊಮ್ಮೆ ಎಂಬಂತಿತ್ತು. ಆಗ ಜನರು ಇನ್ನೂ ವಿಮರ್ಶೆ ಮಾಡುವ ಕೆಲಸವನ್ನು ಪ್ರಾರಂಭಿಸಿರಲಿಲ್ಲ. –ಶಿಕ್ಷಕರೆಂದರೆ ಆಗ ಉನ್ನತ ಸ್ಥಾನವಿತ್ತು, ಅವರನ್ನು ಸಂತರು,  ಅವರು ಸರ್ವಜ್ಞರು ಎಂದೇ ಪರಿಗಣಿಸುತ್ತಿದ್ದರು. ಅವರು ಹೇಳಿದ್ದನ್ನು ಮಕ್ಕಳು ಶಿರಸಾವಹಿಸಿ ಪಾಲಿಸುತ್ತಿದ್ದರು. ಆದರೆ, ಅವರು ಸರಿಯಾದುದನ್ನೇ ಹೇಳುತಿದ್ದರೆ?' ಒಂದು ಅಳತೆ ಎಲ್ಲರಿಗೂ ಸರಿ ಹೊಂದುತ್ತದೆ ಎಂದು ತಿಳಿದ ಕಾಲ ಅದಾಗಿತ್ತು.

ಇದೇ ವೇಳೆ ಸಮಾಜ ಬದಲಾಗುತಿತ್ತು. ತಂದೆ–ತಾಯಂದಿರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ವಿದ್ಯಾವಂತರೂ ವಿಶೇಷಜ್ಞರೂ ಆಗತೊಡಗಿದರು; ಹಾಗಾಗಿ ಅವರು ಶಿಕ್ಷಕರಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷೆ ಮಾಡುತ್ತಿದ್ದರು. ತಮಗೆ ಏನು ಬೇಕೆಂದು ಅವರಿಗೆ ತಿಳಿದಿತ್ತು. ಮಹತ್ವಾಕಾಂಕ್ಷಿಗಳಾದ ಈ ನವ ಪಾಲಕರು ತಮ್ಮ ಮಕ್ಕಳಿಗೆ ಏನೆಲ್ಲ ಕೊಡಬೇಕೆಂದು ತಿಳಿದಿದ್ದರು. ಆ ಮಕ್ಕಳಿಗೆ ಉತ್ತಮ ಸಂಪಾದನೆಯ, ವಾಚನಾಭಿರುಚಿ ಇರುವ ಹಾಗೂ ದೇಶ ಸುತ್ತುವ ಹವ್ಯಾಸವುಳ್ಳ ಪೋಷಕರಿಂದಾಗಿ ಲೋಕಕ್ಕೆ ತೆರೆದುಕೊಳ್ಳವ ಅವಕಾಶ ಲಭಿಸಿತು. ನವ ಹೊಸ ತಲೆಮಾರಿನ ಉದಯವಾಗಿತ್ತು. ಅರವತ್ತರ ದಶಕದಲ್ಲಿ ಹುಟ್ಟಿದ ಪೀಳಿಗೆಯ ಮಕ್ಕಳು ಇವರು. ಇಬ್ಬರೂ ಪೋಷಕರು ಉದ್ಯೋಗವಂತರು. ಮಕ್ಕಳಿಗೆ ಮಾತ್ರ ದಿಕ್ಕಿಲ್ಲದ ಪರಿಸ್ಥಿತಿ. ಅವರು 'ಹೊರಗೀಲಿ ಮಕ್ಕಳು'(ಲ್ಯಾಚ್ ಕೀ ಕಿಡ್ಸ್) ಎಂದೇ ಹೆಸರಾದವರು. ಅಂದರೆ ಶಾಲೆ ಮುಗಿಸಿಕೊಂಡು ಬಂದ ಮಗು ತಾನೇ ಕೀಲಿ ಕೈ ಬಳಸಿ ಮನೆಯ ಒಳಗೆ ಬರುವ ವ್ಯವಸ್ಥೆ. ದಿನದ ಕೆಲಭಾಗ, ಮುಖ್ಯವಾಗಿ ಶಾಲೆ ಬಿಟ್ಟ ಮೇಲೆ ಪೋಷಕರು ಬರುವ ವರೆಗೆ ಈ ಮಕ್ಕಳು ಮನೆಯಲ್ಲಿ ಏಕಾಂಗಿ ಆಗಿರುತ್ತಿದ್ದರು. ಆಗ ಅವರು ಸ್ವತಂತ್ರರು, ಹಾಗಾಗಿ ಎಲ್ಲಾ ಸೌಖ್ಯಸಾಧನಗಳೂ ಅವರ ಬಳಿ ಉಂಟು. ಅದರಿಂದಾಗಿ ಅವರಲ್ಲಿ ಅಸಹನೆ ಮನೆ ಮಾಡಿರುತ್ತದೆ. ಸುದೀರ್ಘ ವಾಕ್ಯಗಳನ್ನು ಓದುವಷ್ಟು ತಾಳ್ಮೆಯೂ ಅವರ ಬಳಿ ಇಲ್ಲ, ಪ್ರತಿಯೊಂದೂ ಬೆರಳತುದಿಯಲ್ಲಿ ಸಿಗಬೇಕು, ಸಿಗುತ್ತಿತ್ತು.  ಗುಂಡಿ ಒತ್ತಿದೊಡನೆ ಮಾಹಿತಿ (ಕಂಪ್ಯೂಟರಿನಿಂದ, ಈಗ ಮೊಬೈಲ್‌ನಿಂದ) ಬರಬೇಕು. ಕತ್ತರಿಸು, ಅಂಟಿಸು ಸಂಸ್ಕೃತಿ ರೂಢಿಯಾಯಿತು, ಅದರಿಂದ ಬರುವ ಅಹಂಕಾರವೂ ಕೂಡ.

ಇಂತಹ ಸನ್ನಿವೇಶದಲ್ಲಿ ಉನ್ನತ ವೇದಿಕೆಯ ಮೇಲೆ ನಿಂತ ಸಂತರಿಗೆಲ್ಲಿಯ ಸ್ಥಾನ? ಆತ/ಆಕೆ ಸಮಯದೊಂದಿಗೆ ಹೆಜ್ಜೆ ಹಾಕಿರಲಿಲ್ಲ. ಅವರಿಗೆ ತರಬೇತಿ ಅವರ ಹಿರಿಯರಿಂದ ಸಿಕ್ಕಿತ್ತು. ಅದು ಬಹುಕಾಲದಿಂದ ಪರೀಕ್ಷೆಗೆ ಒಳಪಟ್ಟ ಪದ್ಧತಿ, ಅಲ್ಲಿ ಶಿಕ್ಷಕರು ಹೇಳಿದ್ದನ್ನು ಮಕ್ಕಳು ಒಪ್ಪಿ

ಹಾಗೆಯೇ ನಡೆದುಕೊಳ್ಳಬೇಕೆಂಬ ಸಂಪ್ರದಾಯ ಇತ್ತು. ಪ್ರಶ್ನೆ ಕೇಳುವುದು ಅಹಂಕಾರದ ದ್ಯೋತಕವೂ, ಅದು ಶಿಕ್ಷಕರ ಜ್ಞಾನವನ್ನು ಅನುಮಾನಿಸಿದಂತೆ ಎಂಬ ಭಾವನೆಯೂ ಇದ್ದಿತು.

ಆ ಮನೋಭಾವವನ್ನು ಬದಲಾಯಿಸಬೇಕಾದ ಕಾಲ ಬಂದಿತ್ತು. ಶಿಕ್ಷಕರು ವಿದ್ಯಾರ್ಥಿಗಳನ್ನು ದೂರುವ, 'ನಮ್ಮ ಕಾಲದಲ್ಲಿ ಹೀಗಿರಲಿಲ್ಲವಪ್ಪ' ಎನ್ನುವ ಕಾಲ ಮುಗಿದಿತ್ತು. ಮೂರು ಬೆರಳುಗಳು ಅವರ ಕಡೆಗೇ ಬೊಟ್ಟು ಮಾಡುತ್ತಿದ್ದವು. ಅವರೀಗ ಬೇರೆಯೇ ಮಾದರಿಯ ಪೋಷಕರು ಹಾಗೂ ವಿದ್ಯಾರ್ಥಿಗಳನ್ನು ಎದುರಿಸಬೇಕಾಗಿತ್ತು. ಶಿಕ್ಷಕರ ಈ ವರ್ಗವೂ ಬದಲಾವಣೆಯನ್ನು ಕಂಡಿದ್ದರು. ಈ ಪೀಳಿಗೆಯ ಮಕ್ಕಳನ್ನು ನಿರ್ವಹಿಸಲು ಬೇಕಾದ ತಯಾರಿ ಅವರಲ್ಲಿ ಇರಲಿಲ್ಲ.

ನಾನು ಪ್ರಖ್ಯಾತ ಶಾಲೆಯ ಪ್ರಿನ್ಸಿಪಾಲೆಯಾದಾಗ ಮಾತ್ರವೇ ನನಗೆ ಸರಿ ಎನಿಸಿದ ಕೆಲಸಗಳನ್ನು ಮಾಡಲು ಸಾಧ್ಯವಾಯಿತು. ಸರಳವಾಗಿ ಹೇಳುವುದಿದ್ದರೆ ಶಿಕ್ಷಕರು ಮತ್ತೆ ಮೊದಲಿಂದ ಕಲಿಯಬೇಕಾದ ಅಗತ್ಯ ಆಗ ಉಂಟಾಯಿತು.

ನಾನು ಮಾಡಿದ ಮೊದಲ ಕಾರ್ಯ ನಾನೇ ತರಬೇತಿ ಪಡೆಯುವುದು. ನಮ್ಮ ಸಂಬಳದ ಕನಿಷ್ಠ ಶೇಕಡಾ 10 ಭಾಗವನ್ನು ನಮ್ಮ ಸ್ವಂತ ವ್ಯಕ್ತಿತ್ವದ ಬೆಳವಣಿಗೆಗೆ ಮೀಸಲಿಡಬೇಕೆಂದು ವಾದಿಸುವವಳು ನಾನು. ಇದು ಪುಸ್ತಕಗಳ ಖರೀದಿ ಹಾಗೂ ಹೊಸ ತರಬೇತಿ ಕೋರ್ಸ್‌ಗಳಿಗೆ ಸೇರ್ಪಡೆ ಇತ್ಯಾದಿ ಇರಬಹುದು. ನಾನು ಪ್ರತಿ ವರ್ಷ ಒಂದು ತರಬೇತಿ ಕೋರ್ಸಿಗೆ ನನ್ನದೇ ಹಣ ಖರ್ಚುಮಾಡಿ ಹಾಜರಾಗುತ್ತಿದ್ದೆ. ವಾಪಸು ಬಂದ ಮೇಲೆ ಅಲ್ಲಿ ಕಲಿತಿದ್ದನ್ನು ಸ್ಲೈಡ್‌ಗಳಾಗಿ ಮಾಡಿ ಶಿಕ್ಷಕವೃಂದದ ಸಭೆಗಳಲ್ಲಿ ಪ್ರದರ್ಶಿಸುತ್ತಿದ್ದೆ. ಕನಿಷ್ಠ ಶೇಕಡಾ 10 ಮಂದಿ ಇದನ್ನು ಅರಗಿಸಿಕೊಂಡರೆ ಅವರಿಂದ ಮತ್ತೆ ಶೇ. 20 ಮಂದಿ ಪ್ರಭಾವಿತರಾಗುತ್ತಾರೆ ಎಂದು ನನಗೆ ಗೊತ್ತಿತ್ತು.

ಈ ಶಾಲೆಯಲ್ಲಿ ನಾನು ಶಿಕ್ಷಕರಿಗೆ ಏರ್ಪಡಿಸಿದ ಮೊದಲನೇ ತರಬೇತಿ ಕೋರ್ಸ್ ತಂತ್ರಜ್ಞಾನದ ಕುರಿತಾಗಿತ್ತು. ಅವರು ತಂತ್ರಜ್ಞಾನದ ಕುರಿತು ಉಳ್ಳ ಭಯವನ್ನು ಬಿಡುವಂತೆ ಮಾಡಬೇಕಿತ್ತು. ಈ ಭಯ ಕಾಣಿಸಿಕೊಳ್ಳುವ ರೀತಿ ಹಲವು ಬಗೆಯದ್ದು: ಅಡ್ಡಿ ಮಾಡುವುದು, (ಒಹ್, ಅದೆಲ್ಲ ನಮಗೆ ಯಾಕೆ, ಇಷ್ಟು ವರ್ಷ ಅದಿಲ್ಲದೆ ಕೆಲಸ ಮಾಡಿಲ್ಲವೆ?) ಅಸಂತೋಷ–(ಕಲಿಯುವುದು ಕಷ್ಟ, ಗೊಂದಲಮಯ, ಈ ವಯಸ್ಸಿನಲ್ಲಿ ನಾವು ಕಲಿಯುವುದು ಹೇಗೆ?) ಕಾಣಿಸಿಕೊಳ್ಳುತ್ತವೆ. ಕಂಪ್ಯೂಟರ್‌ಗಳು ಕಂಪ್ಯೂಟರ್ ಸೈನ್ಸ್ ವಿಭಾಗಕ್ಕೆ ಸೇರಿದ್ದು ಎಂಬ ಬಲವಾದ ತಿಳಿವಳಿಕೆ ಇತ್ತು. ನಾನು ಆ ಭಾವನೆಯನ್ನು ಹೋಗಲಾಡಿಸಲು ಪ್ರಯತ್ನಿಸಿದೆ. ಕಂಪ್ಯೂಟರ್‌ಗಳು ಇಡೀ ಶಾಲೆಗೆ ಸೇರಿದ್ದು. ಆ ವಿಭಾಗದ ವಿದ್ಯಾರ್ಥಿಗಳಿಗೆ ಅವುಗಳ ಬಳಕೆಗೆ ಆದ್ಯತೆ ಇದೆಯಾದರೂ ಅವುಗಳನ್ನು ಬಿಡುವಾದಾಗ ಬೇರೆಯವರು ಬಳಸಬಹುದು ಎಂದು ತಿಳಿಸಿದೆ. ಇದನ್ನು ಅನುಸರಿಸಿ ಇನ್ನೊಂದು ನೋಟೀಸು ಹೊರಡಿಸಿದೆ. 'ಈ ಕೆಳಗಿನ ಪ್ರಶ್ನೆ ಪತ್ರಿಕೆಗಳನ್ನು ಶಿಕ್ಷಕರು ಮುದ್ರಿಸಲು ಓರಣಗೊಳಿಸಿ ಫ್ಲಾಪಿಯಲ್ಲಿ ಹಾಕಿ ಕೊಡಬೇಕು.' ವಿಶೇಷ ಗುರುತುಗಳು ಹಾಗೂ ಚಿತ್ರಗಳು ಬೇಕಾಗಿಲ್ಲದ ಇಂಗ್ಲಿಷ್ ಮುಂತಾದ ಭಾಷಾ ಪ್ರಶ್ನೆಪತ್ರಿಕೆಗಳನ್ನು ಮೊದಲು ಆಯ್ಕೆ ಮಾಡಿಕೊಂಡೆ. ಕಂಪ್ಯೂಟರ್ ಸೈನ್ಸ್ ಶಿಕ್ಷಕರು ಶಾಲಾ ವೇಳೆಯ ನಂತರ ಇತರ ಶಿಕ್ಷಕರಿಗೆ ಕಂಪ್ಯೂಟರ್ ಕಲಿಸುವರು ಎಂದೂ ನೋಟೀಸ್‌ನಲ್ಲಿ ನಮೂದಿಸಿದೆ. ಶಾಲೆಯಲ್ಲಿ ಗುಲ್ಲೋಗುಲ್ಲು. ''ನಮಗೆ ಕಲಿಯಲು ಬಾರದು, ನಮಗೆ ಟೈಪಿಂಗ್ ಬಾರದು. ನಮಗೆ ತಿಳಿಯದು, ನಮ್ಮಿಂದಾಗದು... ಆಗದು, ಆಗದು...'' ನಾನು ಕಿವಿಮುಚ್ಚಿಕೊಂಡು ಕುಳಿತೆ. ''ನನ್ನಿಂದ ಆಗುವುದಾದರೆ ನಿಮ್ಮಿಂದ ಯಾಕಾಗದು?'' ನಾನು ಕೇಳಿದೆ. ಪ್ರಾರಂಭದ ಪ್ರತಿರೋಧದ ನಂತರ ಕೆಲಸ ಆಯಿತು; ಆದರೆ ಅದರಿಂದ ನನ್ನ ಜನಪ್ರಿಯತೆ ಸ್ವಲ್ಪ ಕುಸಿಯಿತು. ಆದರೆ ಪ್ರಶ್ನೆಪತ್ರಿಕೆಗಳು ಮುದ್ರಿತವಾಗಿ ಬಂದಾಗ ಎಲ್ಲರಲ್ಲೂ ಸಂಭ್ರಮವೋ ಸಂಭ್ರಮ. ಅವು ಕೈಬರಹದ ಬದಲು ಮುದ್ರಿತವಾಗಿ ಅಂದವಾಗಿದ್ದವು. ಕಾಗದದ ಉಳಿತಾಯವೂ ಆಯಿತು. ಅದನ್ನು ಮಾಡಿದವರಲ್ಲಿ ಹೆಮ್ಮೆಯ ಭಾವನೆಯನ್ನು ನಾನು ಗುರುತಿಸಿದೆ. ಮೊದಲನೆಯದಾಗಿ ಅವರು ಸಬಲೀಕರಣದ ಭಾವನೆ ಮೂಡಿತ್ತು. ಎರಡನೆಯದಾಗಿ ತಾವು ಮೊದಲಿಗರಾದೆವು ಎಂಬ ಒಡೆತನದ ಜಂಬ. ಬೇರೆ ಯಾರೂ ಮಾಡಿರದ ಕಂಪ್ಯೂಟರ್ ಕಲಿಕೆ ಅವರಿಂದ ಸಾಧ್ಯವಾಗಿತ್ತು. ಇದೇ ಆಗುವುದೆಂಬ ನನ್ನ ಆಶಾವಾದ ನಿಜವಾಗಿತ್ತು. ಮುಂದಿನ ಬಾರಿ ಇನ್ನೂ ಕೆಲವರು ತಾವಾಗಿಯೇ ಮುಂದೆ ಬಂದರು. ನಾನು ಅವರನ್ನು ಎಲ್ಲರ ಮುಂದೆ ಹೊಗಳಿದೆ. ಇನ್ನಷ್ಟು ಮಂದಿ ಸೇರಿದರು. ಈ ವಿಷಯದಲ್ಲಿ ನನ್ನ ಕೆಲಸ ಮುಗಿದಿತ್ತು. ನಾನು ಸುಮ್ಮನೇ ನೋಡುತ್ತ ಕುಳಿತೆ. ಭಾಷಾ ಶಿಕ್ಷಕರೂ ಹಿಂದೆ ಉಳಿಯಲಿಲ್ಲ. ಬೇರೆ ಬೇರೆ ಕಾರ್ಯಗಳಿಗೆ ತಂತ್ರಾಂಶ ಬೇಕೆಂದು ಅವರು ಬೇಡಿಕೆ ಇಟ್ಟರು. ಕೆಲವೇ ಕಾಲದಲ್ಲಿ ಇನ್ನಷ್ಟು ಕಂಪ್ಯೂಟರ್‌ಗಳಿಗೆ ಬೇಡಿಕೆ ಬಂತು.

ನಂತರ ನಾವು ನಿಧಾನವಾಗಿ ದೃಕ್–ಶ್ರವಣ ಸಾಧನಗಳ ನೆರವಿನೊಡನೆ ಕಲಿಸುವುದನ್ನು ಪ್ರಾರಂಭಿಸಿದೆವು. ಪರದೆ ಹಾಗೂ ಪ್ರೊಜೆಕ್ಟರ್‌ಗಳನ್ನು ಹೊಂದಿದ ಒಂದು ದೃಕ್–ಶ್ರವಣ ಕೊಠಡಿಯನ್ನು ಸಿದ್ಧಪಡಿಸಿದೆವು. ಅದು ದೂರದಲ್ಲಿ ಇದ್ದುದರಿಂದ ಅದನ್ನು ಬಳಸುವಲ್ಲಿ ಹಿಂಜರಿಕೆ ಕಂಡುಬಂತು. ನಾನು ಸಿಬ್ಬಂದಿ ವರ್ಗದ ಸಭೆಯನ್ನು ಅದರಲ್ಲೇ ನಡೆಸತೊಡಗಿದೆ. ಇದರಿಂದ ಅದು ದೂರವಿದೆ ಎಂಬ ಭಾವನೆ ಕಡಿಮೆಯಾಯಿತು. ನಂತರ ಅದನ್ನು ಮೇಲಿನ ತರಗತಿಗಳನ್ನು ನಡೆಸಲು ಉಪಯೋಗಿಸಲು ಆರಂಭಿಸಿದೆವು. ಈಗ ಆ ಕೊಠಡಿಯನ್ನು ಮೊದಲೇ ಬುಕ್ ಮಾಡಬೇಕು. ಅದನ್ನು ಪಡೆಯಲು ಸರತಿಯ ಸಾಲು, ಜಗಳಗಳೂ ನಡೆಯುತ್ತವೆ.

ತರಗತಿ ಕೊಠಡಿಗಳಿಗೆ ಸ್ಮಾರ್ಟ್ ಬೋರ್ಡ್‌ಗಳೂ ಪ್ರೊಜೆಕ್ಟರ್‌ಗಳೂ ಅಗತ್ಯವಿವೆ ಎಂದು ಈ ಹಂತದಲ್ಲಿ ನನಗೆ ಅನ್ನಿಸತೊಡಗಿತು. ಇದಕ್ಕೆಲ್ಲ ತುಂಬಾ ಹಣ ಬೇಕಿತ್ತು–ಅದನ್ನು ಶಿಕ್ಷಣ ಶುಲ್ಕಕ್ಕೆ ಸೇರಿಸುವ ಮೂಲಕ ಸಂಗ್ರಹಿಸತೊಡಗಿದೆವು. ಈಗ ಆ ಶಾಲೆಯಲ್ಲಿ ಎಲ್.ಕೆ.ಜಿಯಿಂದ ಎಂಟನೇ ತರಗತಿ ವರೆಗೆ ಎಲ್ಲಾ ತರಗತಿಗಳಲ್ಲಿಯೂ ಅಂತಹ ಬೋರ್ಡ್‌ಗಳು ಇವೆ. ಕಲಿಕಾ ತಂತ್ರಾಂಶವಾದ ನೋಟ್‌ಬುಕ್ ಸಾಫ್ಟ್‌ವೇರ್ ಅನ್ನು ನಮ್ಮ ಬೋಧನಾಶಾಸ್ತ್ರಕ್ಕೆ ಹೇಗೆ ಅಳವಡಿಸಿಕೊಂಡೆವು ಎಂಬುದನ್ನು SMARTನ ಹಿರಿಯ ಅಧಿಕಾರಿಗಳಿಗೆ ವಿವರಿಸಲು ನನ್ನನ್ನು ಆಹ್ವಾನಿಸಿದರು.

ತಮ್ಮ ಶಕ್ತಿ ಏನು ಎಂಬುದು ಶಿಕ್ಷಕರಿಗೆ ಮನವರಿಕೆ ಆಯಿತು ಎಂಬುದೇ ಮುಖ್ಯ ವಿಷಯ, ತಮ್ಮ ನಗರದಲ್ಲಿ ತಾವು ಒಂದು ಕ್ರಾಂತಿಯ ಮೊದಲಿಗರು ಎಂಬ ಹೆಮ್ಮೆ ಅವರದ್ದಾಗಿತ್ತು. ನನ್ನ ಕಲ್ಪನೆ ಹಾಗೂ ಅದನ್ನು ಸಾಕಾರಗೊಳಿಸಲು ಕೈಗೊಂಡ ಯುಕ್ತಿ ಸಫಲವಾಗಿತ್ತು. ಶಿಕ್ಷಕರೂ ವಿದ್ಯಾರ್ಥಿಗಳೂ ಹೀಗೆ ಕ್ರಿಯಾಶೀಲರಾಗುವುದನ್ನು ನೋಡಿ ನಾನು ಸಂಭ್ರಮಿಸಿದೆ. ಶಾಲೆಯ ಭವಿಷ್ಯದ ಮಾರ್ಗದಲ್ಲಿ ಅದೊಂದು ತ್ರಿವಿಕ್ರಮ ಹೆಜ್ಜೆಯಾಗಿತ್ತು.

ಈಗ ಶಿಕ್ಷಕರ ವೈಯಕ್ತಿಕ ಬೆಳವಣಿಗೆಯ ಕಡೆಗೆ ನನ್ನ ಗಮನ ಹರಿಯಿತು. 1995ರಲ್ಲಿ ನಾನು ಶೈಕ್ಷಣಿಕ ನಿರ್ವಹಣೆ ಹಾಗೂ ಅಭಿವೃದ್ಧಿ ಕೇಂದ್ರ (ಸೆಂಟರ್ ಫಾರ್ ಎಜುಕೇಶನಲ್ ಮ್ಯಾನೇಜ್‌ಮೆಂಟ್ ಆ್ಯಂಡ್ ಡೆವಲಪ್‌ಮೆಂಟ್–CMED) ದೆಹಲಿಯಲ್ಲಿ ಏರ್ಪಡಿಸಿದ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದೆ. ಅದರಲ್ಲಿನ ಸಂಪನ್ಮೂಲ ವ್ಯಕ್ತಿಗಳು ಅತ್ಯಂತ ಸಮರ್ಥರೂ, ಬದ್ಧತೆಯುಳ್ಳವರೂ ಆಗಿದ್ದರು. ತರಬೇತಿಯ ತಿರುಳು ಹಾಗೂ ವಿನ್ಯಾಸ ಅತ್ಯುತ್ತಮವಾಗಿತ್ತು. ಇದರಲ್ಲಿ ಮೂರು ಮುಖ್ಯ ಅಂಶಗಳಿದ್ದವು; ವೈಯಕ್ತಿಕ ಬೆಳವಣಿಗೆ, ಬೋಧನಾ ವಿನ್ಯಾಸ ಹಾಗೂ ಸಾಂಸ್ಥಿಕ ಆಡಳಿತ ನಿರ್ವಹಣೆ. ಇಂತಹ ಒಂದು ತರಬೇತಿಯನ್ನು ಚೆನ್ನೈನಲ್ಲಿ ನಡೆಸುವ ಅಗತ್ಯವಿದೆಯೆಂದು ಸಂಪನ್ಮೂಲ ವ್ಯಕ್ತಿಗಳಿಗೆ ಮನವರಿಕೆಯಾಯಿತು. ಈ ತರಬೇತಿ ಚೆನ್ನೈನಲ್ಲಿ ನಮ್ಮ ಶಾಲೆಯ ಪ್ರಾಯೋಜಕತ್ವದಲ್ಲಿ ನಡೆಯಿತು. 35 ಮಂದಿ ಅಭ್ಯರ್ಥಿಗಳಿದ್ದರು. ಇದರಲ್ಲಿ ನಾನೂ ಒಬ್ಬಾಕೆ ಸಂಪನ್ಮೂಲ ವ್ಯಕ್ತಿಯಾಗಿದ್ದು ಕೆಲವು ತರಗತಿಗಳನ್ನು ನಡೆಸಿದೆ. ವಿಶೇಷ ಅರ್ಹತೆ ಇರುವ ಕಾರಣಕ್ಕೆ ಪ್ರಿನ್ಸಿಪಾಲರಾಗುತ್ತಾರೆ ಹಾಗೂ ಅವರಿಗೆ ಹೆಚ್ಚಿನ ಜ್ಞಾನ ಇರುತ್ತದೆ ಎಂಬ ಭಾವನೆಯನ್ನು ಈಗ ಪ್ರಶ್ನಿಸಲಾಗುತ್ತಿದೆ. ಕಲಿಕೆ ಎಂಬುದು ನಿರಂತರ ನಡೆಯುವ ಪ್ರಕ್ರಿಯೆ ಎಂಬುದು ನನ್ನ ಭಾವನೆ. ಪ್ರಿನ್ಸಿಪಾಲನಾಗಲು ಬೇಕಾದ ಅರ್ಹತೆಗಳು ಒಬ್ಬ ಶಿಕ್ಷಕನಾಗಲು ಬೇಕಾದ ಅರ್ಹತೆಗಳಿಗಿಂತ ಬೇರೆಯೇ ಆದದ್ದು. ಕೆಲವು ಶಾಲೆಗಳು ಉತ್ತಮ ಶಿಕ್ಷಕನೊಬ್ಬನನ್ನು ಆರಿಸಿ ಪ್ರಿನ್ಸಿಪಾಲನನ್ನಾಗಿ ಮಾಡುವ ತಪ್ಪು ಕೆಲಸ ಮಾಡುತ್ತವೆ. ಆತ/ಆಕೆ ಕೆಟ್ಟ ಪ್ರಿನ್ಸಿಪಾಲನಾಗುತ್ತಾನೆ. ಅಲ್ಲದೆ ಆಗ ಪ್ರಿನ್ಸಿಪಾಲರ ತರಬೇತಿಗೆ ಯಾವ ಸಂಸ್ಥೆಯೂ ಇರಲಿಲ್ಲ. ತಾವು ಎಲ್ಲಾ ತರಬೇತಿ ಹಾಗೂ ಕಲಿಕೆಗಿಂತ ಮೇಲಿನವರು ಎಂದು ಪ್ರಿನ್ಸಿಪಾಲರುಗಳೂ ಭಾವಿಸುತ್ತ ಶಿಕ್ಷಕವರ್ಗದ ಇತರರನ್ನು ಮಾತ್ರ ತರಬೇತಿಗೆ ಕಳಿಸುತ್ತಲೇ ಇದ್ದರು. ಇಂದು ಪ್ರಿನ್ಸಿಪಾಲರು ತಾವಿರುವ ಸ್ಥಾನವನ್ನು ಉಳಿಸಿಕೊಳ್ಳಬೇಕಿದ್ದರೆ ಪರಿಶ್ರಮ ಪಡಲೇಬೇಕಾಗುತ್ತದೆ. ಒಂದು ವರ್ಷದ ಒಂದು ತರಬೇತಿಗೆ ನಾನು ನನ್ನ ಇಬ್ಬರು ಹಿರಿಯ ಶಿಕ್ಷಕರನ್ನು ಕಳಿಸಿದೆ; ಆದರೆ ನಾನು ಮಾಡುತ್ತಿರುವುದೇನು ಎಂದು ಅರ್ಥಮಾಡಿಕೊಂಡ ಇನ್ನೂ ಇಬ್ಬರು ಶಿಕ್ಷಕರು ಸಿದ್ಧರಾದರು. ಆಮೇಲೆ ಒಂದು ಸಂಸ್ಥೆ ಈ ತರಬೇತಿಗೆ ಪ್ರಾಯೋಜಕತ್ವ ಒದಗಿಸಲು ಮುಂದೆ ಬಂತು. ಈಗ ಅಲ್ಲಿ ಒಂಬತ್ತನೇ ತಂಡ ತರಬೇತಿ ಪಡೆಯುತ್ತಿದೆ ಎನ್ನಲು ನನಗೆ ಹೆಮ್ಮೆ ಅನಿಸುತ್ತದೆ.

ನನ್ನ ಇನ್ನೊಂದು ಕನಸೂ ಸಾಕಾರಗೊಂಡಿದೆ. ಪ್ರಿನ್ಸಿಪಾಲರ ಕೆಲಸ ನಿರ್ದೇಶನ ನೀಡುವುದು ಹಾಗೂ ಆ ಕೆಲವನ್ನು ತಾವೇ ಮಾಡಿದ್ದೇವೆ ಎಂಬ ಭಾವನೆಯನ್ನು ಶಿಕ್ಷಕರಲ್ಲಿ ಮೂಡಿಸುವುದು. ಆ ವೇಳೆಗೆ ಸಿಬಿಎಸ್‌ಇಯ ಶೈಕ್ಷಣಿಕ ನಿರ್ದೇಶಕರು ನನ್ನನ್ನು ಪ್ರಿನ್ಸಿಪಾಲರಿಗೆ ತರಬೇತಿ ನೀಡುವ ಸಿಬಿಎಸ್‌ಇಯ ಸಂಪನ್ಮೂಲ ವ್ಯಕ್ತಿಯಾಗಿ ನಿಯುಕ್ತಿಗೊಳಿಸಿದರು. ಅವರ ಜತೆ ಸೇರಿ ನಾನು ತ್ರಿಶೂರು, ಕಲ್ಲಿಕೋಟೆ, ಹೈದರಾಬಾದ್ ಮುಂತಾದ ಸ್ಥಳಗಳಲ್ಲಿ ಪ್ರಿನ್ಸಿಪಾಲರಿಗೆ ತರಬೇತಿ ನೀಡಿದೆ. ಇದರಿಂದ ನಾನು ಪ್ರಿನ್ಸಿಪಾಲರು ಎದುರಿಸುವ ಸವಾಲುಗಳ ಬಗ್ಗೆ ಬಹಳಷ್ಟು ತಿಳಿದುಕೊಂಡೆ.

ಸುಮಾರಾಗಿ ಅದೇ ಕಾಲದಲ್ಲಿ ಅಧ್ಯಾಪನದಲ್ಲಿ ತಂತ್ರಜ್ಞಾನವನ್ನು ಬಳಸುವ ಕುರಿತಾಗಿ ಮೈಕ್ರೋಸಾಫ್ಟ್‌ನವರು ದೆಹಲಿಯಲ್ಲಿ ನಡೆಸಿದ ಶಿಕ್ಷಣ ಶೃಂಗಸಭೆಯಲ್ಲಿನ ಒಂದೆರಡು ಸಮಿತಿಗಳಲ್ಲಿ ಭಾಗವಹಿಸಲು ನನ್ನನ್ನು ಆಹ್ವಾನಿಸಿದ್ದರು. ಈ ಸಮ್ಮೇಳನವು ಪ್ರಪಂಚದ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಇರುವ ತಂತ್ರಜ್ಞಾನದ ಬಳಕೆ ಕುರಿತಾದ ನನ್ನ ಅರಿವನ್ನು ವಿಸ್ತರಿಸಿತು. ನನ್ನ ಆಶಯಗಳು ಹಾಗೂ ಆಲೋಚನೆಗಳು ಹೊಸ ಆಯಾಮಗಳನ್ನು ಪಡೆದುಕೊಂಡವು; ನಾನು ತಲೆಯಲ್ಲಿ ಆಶಾವಾದದ ಮೂಟೆಯನ್ನು ಹೊತ್ತು ವಾಪಸು ಬಂದೆ.

ನಾನು ಶಿಕ್ಷಕ ವೃಂದಕ್ಕೆ ತೋರಿಸಿದ ಸ್ಲೈಡ್‌ಗಳಲ್ಲಿ ಒಂದು ಈ ಹೊಸ ತಲೆಮಾರಿನ (ಜನರೇಶನ್‌ಎಕ್ಸ್) ಕುರಿತಾಗಿಯೂ ಇದ್ದಿತು. ನಿರಂತರ ಕಲಿಕೆಯ ಅಗತ್ಯ, ಅಧ್ಯಾಪನದ ಮೋಹ ಹಾಗೂ ಹೊಸ ಶಿಕ್ಷಕರಿಗೆ ಪ್ರೇರಣೆ ನೀಡುವ ಅಗತ್ಯವನ್ನು ಕೂಡ ಅದರಲ್ಲಿ ಪ್ರತಿಪಾದಿಸಿದ್ದೆ. ಸಂದೇಶ ಇಷ್ಟೆ ; ''ನೀವು ವಿಷಯವನ್ನು ನೇರವಾಗಿ ಬೋಧಿಸಬೇಕೆಂದಿಲ್ಲ. ವಿಷಯದ ಕುರಿತು ನಿಮಗೆ ಇರುವ ಮೋಹವನ್ನು ಅವರಿಗೆ ದಾಟಿಸಿ; ವಿದ್ಯಾರ್ಥಿಗಳು ವಿಷಯವನ್ನು ತಾವೇ ಕಲಿತುಕೊಳ್ಳುತ್ತಾರೆ.'' ಸಂಪರ್ಕ, ಭಾವನಾತ್ಮಕ ಬುದ್ಧಿಮತ್ತೆ, ವಿಭಿನ್ನ ಬೋಧನೆ, ತಂಡ

ಸ್ಫೂರ್ತಿ, ಪಠ್ಯ ವಿನ್ಯಾಸ, ಪ್ರಶ್ನೆಗಳ ವಿಧಗಳು, ಪ್ರಶ್ನೆ ಪತ್ರಿಕೆ ರಚನೆ, ಪ್ರಾರಂಭಿಕ ಹಾಗೂ ಅಂತಿಮ ಮೌಲ್ಯಮಾಪನ, ಹಾಗೂ ಅಧ್ಯಾಪನದಲ್ಲಿ ಮುಂದುವರಿಯಲು ಅಗತ್ಯವಿರುವ ಇತರ ಅನೇಕ ಪರಿಣತಿಗಳ ಬಗ್ಗೆ ಅನೇಕ ತರಬೇತಿ ಶಿಬಿರಗಳು ನಡೆದಿವೆ.

ಸುಮಾರು ಒಂದು ದಶಕ ಕಳೆದ ಮೇಲೆ ನಾವು ಶಿಕ್ಷಕರ ತರಬೇತಿ ಕೇಂದ್ರವೊಂದನ್ನು ಸ್ಥಾಪಿಸಲು ಸಿದ್ಧರಾದೆವು. ಸುಮಾರು ಒಂದು ವರ್ಷ ಕೆಲಸ ಮಾಡಿ ನಾನು ಹದಿನೈದು ದಿನಗಳ ತರಬೇತಿ ಮಾದರಿಯೊಂದನ್ನು ಶಿಕ್ಷಕರ ಫಿನಿಶಿಂಗ್ ಸ್ಕೂಲ್ ರೀತಿಯಲ್ಲಿ ಸಿದ್ಧಪಡಿಸಿದೆ. ಇಪ್ಪತ್ತು ಮಂದಿ ಹೊಸ ಶಿಕ್ಷಕರು ಅದರಲ್ಲಿ ತರಬೇತಿ ಪಡೆದು ನಮ್ಮ ಶಾಲೆಯಲ್ಲಿಯೂ ಕೆಲಸ ಮಾಡಿದರು. ದುರದೃಷ್ಟವಶಾತ್ ನಮ್ಮ ಶಾಲೆ ಈ ಕೇಂದ್ರವನ್ನು ಮುಚ್ಚಬೇಕಾಗಿ ಬಂತು. ಶಾಲೆಯು ಉಪನಗರದಲ್ಲಿ ಶಾಖೆಯೊಂದನ್ನು ತೆರೆಯಲು ನಿರ್ಧರಿಸಿ ಆ ಕಾರ್ಯದಲ್ಲಿ ಮಗ್ನವಾಯಿತು. ಈ ಶಾಖೆ ನಾವು ನಿಲ್ಲಿಸಿದಲ್ಲಿಂದ ಕಾರ್ಯವನ್ನು ಮುಂದುವರಿಸಿತು. ಅಲ್ಲಿನ ಶಿಕ್ಷಕರು ಹೆಚ್ಚು ಅನುಭವಿಗಳಾಗಿದ್ದರು. ಪ್ರಿನ್ಸಿಪಾಲ್ ಸ್ವತಃ ತಂತ್ರಜ್ಞಾನ ಬಳಸುವುದರಲ್ಲಿ ತರಬೇತಿ ಹೊಂದಿದ್ದು ತಂತ್ರಜ್ಞಾನವನ್ನು ಲೀಲಾಜಾಲವಾಗಿ ಉಪಯೋಗಿಸುತ್ತಿದ್ದರು. ಈ ಶಾಲೆ ಪ್ರಾರಂಭದಿಂದ ಲೇ ಬಹುತೇಕ ಕಾಗದ ರಹಿತವಾಗಿಯೆ ಶುರುವಾಯಿತು. ಎಲ್ಲಾ ಶಿಕ್ಷಕರೂ ಅಂತರ್ಜಾಲವನ್ನು ಬಳಸುವವರಾಗಿದ್ದು ಪೋಷಕರೂ ಮೊಬೈಲ್ ಅಪ್ಲಿಕೇಶನ್ ಅಥವಾ ವಾಟ್ಸ್ಯಾಪ್ ಮೂಲಕ ಸಂಪರ್ಕ ಜಾಲವನ್ನು ಹೊಂದಿದ್ದರು.

17 ವರ್ಷ ಪ್ರಿನ್ಸಿಪಾಲ್ ಆಗಿದ್ದು ನಿವೃತ್ತಳಾದೆ. ಶಿಕ್ಷಕರ ಬೆಳವಣಿಗೆಗೆ ನನ್ನ ಅಳಿಲು ಸೇವೆಯನ್ನು ಸಲ್ಲಿಸಿದ ತೃಪ್ತಿ ನನ್ನಲ್ಲಿ ತುಂಬಿದೆ. ನಾನಾ ಶಾಲೆಗಳು ಕಮ್ಮಟಗಳಿಗೆ ನನ್ನನ್ನು ಈಗಲೂ ಆಹ್ವಾನಿಸುತ್ತಿವೆ. ಇದು ನನ್ನಿಡೀ ಜೀವಮಾನದ ಉದ್ಯೋಗವೆಂದೇ ಭಾವಿಸಿದ್ದೇನೆ. —ಅದು ನಿರಂತರ ಕಲಿಯಲು ಹಾಗೂ ಓದಲು ಅವಕಾಶ ಕೊಡುತ್ತದೆ; ಆದ್ದರಿಂದಲೇ ತುಂಬಾ ಸಂತೋಷವಾಗಿದ್ದೇನೆ.

ಶಿಕ್ಷಕರ ಬೆಳವಣಿಗೆಯ ಪ್ರಕ್ರಿಯೆ ಬಲು ದೂರ ಸಾಗಿ ಬಂದಿದೆ.

ಭವಾನಿ ಅವರು ಚೆನ್ನೈನ ವಿದ್ಯಾಮಂದಿರ ಸೀನಿಯರ್ ಸೆಕೆಂಡರಿ ಸ್ಕೂಲ್‌ನ ಮಾಜಿ ಪ್ರಿನ್ಸಿಪಾಲರು. ಅವರು 17 ವರ್ಷ ಪ್ರಿನ್ಸಿಪಾಲ್ ಆಗಿದ್ದು ನಿವೃತ್ತರಾದರು. ಅವರು ಅನೇಕ ಶೈಕ್ಷಣಿಕ ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿ ಸದಸ್ಯರಾಗಿದ್ದು ಸಂಪನ್ಮೂಲ ವ್ಯಕ್ತಿಯೂ ಸಲಹೆಗಾರರೂ ಆಗಿದ್ದಾರೆ. ಅವರನ್ನು ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಬಹುದು.

bhavarag@gmail.com

OR

Bhavani1954@hotmail.com